Sri A. G. RAMACHANDRA RAO.—No, Sir. Under the Rules, the Public Service Commission has to hold an examination and make the selection. And they could not make a selection under the category of Harijans, because no applications were sent there.

Sri B. RACHIAH.—Will they re-advertise these vacancies?

Sri A. G. RAMACHANDRA RAO.—As a matter of fact, the rules are under revision. Immediately after that, the procedure enunciated under the rules will be followed.

Sri B. RACHIAH.—How long will these two vacancies be reserved?

Sri A. G. RAMACHANDRA RAO.—We are revising the rules to further facilitate people being taken.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅರ್ಜಿಗಳನ್ನು ಕರೆದಾಗ ಕ್ವಾಲಿಫಿಕೇಷ್ಷ ಇದ್ದವರು ಇರಲಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಈಗ ಮೂರು ವರ್ಷಗಳ ಹಿಂದೆ ತಾನೆ ಈ ರೀತಿ ಅರ್ಜಿ ಹಾಕುವುದಕ್ಕೆ ಅರ್ಹತೆ ಇಲ್ಲದೇ ಇದ್ದುದು.

ಶ್ರೀ ಎ. ಜಿ ರಾಮಚಂದ್ರರಾವ್.—ನಾಲ್ಕು ವರ್ಷಗಳಾಗಿವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ನಾಲ್ಕು ವರ್ಷಗಳಾಗಿವೆ. ಇದನ್ನು ನಹಾನುಭೂತಿಯಿಂದ ಪರಿಶೀಲನೆ ಮಾಡತ್ತೇವೆ ಎಂದು ತಾವು ಹಿಂದೆ ಇದೇ ಅಸೆಂಬ್ಲಿಯಲ್ಲಿ ಉತ್ತರ ಕೊಟ್ಟಿದ್ದೀರಿ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಟ್ಟಿದ್ದು ಹಾಗೆ ಜ್ಞಾಪಕ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಿದ್ದ ಮೇಲೆ ಈ ಎರಡು ವೇಕೆನ್ಸಿಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡುವುದಕ್ಕೆ ತೊಂದರೆ ಏನೂ ಇಲ್ಲವಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೂ ಕೂಡ ರೂಲ್ಸ್ ಬದಲಾವಣೆ ಮಾಡಬೇಕು. ಅದು ಪರಿಶೀಲನೆಯಲ್ಲಿದೆ.

ಶ್ರೀ ಆರ್. ಅನಂತರಾಮ್.—ಪಬ್ಲಿಕ್ ಸರ್ವೀಸ್ ಕಮಿಷನವರು ತಮ್ಮ ನಂಟರನ್ನೇ ಮುಸೀಫ್ ಆಗಿ ನೇಮಕ ಮಾಡಿರುವ ಸುದ್ದಿ ತಮಗೆ ತಿಳಿದು ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಇದೇ ಪ್ರಶ್ನೆ ಹಿಂದೆ ಕೇಳಲಾಗಿತ್ತು. ಅದಕ್ಕೆ ಜವಾಬು ಕೊಟ್ಟಿದ್ದೇನೆ. ಆ ರೀತಿ ಮಾಡಿರುವುದು ನರ್ಕಾರದವರಿಗೆ ಗೊತ್ತಿಲ್ಲ.

Multi-purpose High Schools.

Q.—127. Sri G. SIVAPPA (Holalkere).—

Will the Government be pleased to state:—

(*a*) the number of multi-purpose high schools that are recommended in the State and the places where they are recommended;

(*b*) when they are going to be started;

(*c*) the nature of education to be given;

(*d*) the financial aid given to these high schools by the State and the Centre?

A.—Sri A. G. RAMACHANDRA RAO (Minister for Law and Education).—

(*a*), (*b*), (*c*), and (*d*) The matter is under consideration in consultation with the Government of India.

Sri G. SIVAPPA.—Since what time consideration of starting multi-purpose High Schools is pending before the Government?

*Sri A. G. RAMACHANDRA RAO.—For the last few months. Just two days ago we have received a telegraphic communication to say thay have approved the list. But details we have not yet received.

Sri G. SIVAPPA.—May I know what the list is?

Sri A. G. RAMACHANDRA RAO.—I will place it on the Table of the House.

Sri G. SIVAPPA.—May we know the nature of education imparted in these High Schools?

Sri A. G. RAMACHANDRA RAO.—Professional and craft courses will be opened in the schools which have been selected.

Loan to Vokkaligara Hostel, Hassan.

Q.—124. Sri D. R. KARI GOWDA (Hassan).—

Will the Government be pleased to state:—

whether there was an application for a loan from Vokkaligara Hostel, Hassan?

A.—Sri A. G. RAMACHANDRA RAO (Minister for Law and Education).—

Yes.

ಶ್ರೀ ಡಿ. ಆರ್. ಕರಿಗೌಡ.—ಒಂದು ಅರ್ಜಿ ಬಂದಿತ್ತು ಎಂದು ಹೇಳಿದ್ದೀರಿ. ಅದರ ಮೇಲೆ ಏನು ಆರ್ಡರ್ ಮಾಡಿದ್ದೀರಿ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿದ್ದೇವೆ. ಜವಾಬುಕೊಟ್ಟಿದ್ದಾರೆ. ನಾವು ಕೇಳಿದ ಪ್ರಶ್ನೆ ಒಂದು ಅವರು ಜವಾಬು ಕೊಟ್ಟಿರುವುದು ಇನ್ನೊಂದು. So we have got to pursue the matter further.

ಶ್ರೀ ಡಿ. ಆರ್. ಕರಿಗೌಡ.—ಮೈಸೂರಿನವರಿಗೆ ಸಾಲಕೊಡುವುದಕ್ಕೆ ತಮಗೆ ಅಧಿಕಾರ ಎಲ್ಲವೆ? ಇಂಡಿಯಾ ಸರ್ಕಾರಕ್ಕೆ ಏಕೆ ಬರೆಯಬೇಕಾಗಿತ್ತು?

ಶ್ರೀ ಎ. ಜಿ. ರಾಮಚಂದ್ರರಾವ್.—ಇಂಡಿಯಾ ಸರ್ಕಾರದವರಿಗೆ ಕಳುಹಿಸಬೇಕು ಎಂದು ಅರ್ಜಿಕೊಟ್ಟಿದ್ದರಿಂದ ಅದನ್ನು ಅವರಿಗೆ ಕಳುಹಿಸಿದ್ದೇವೆ. ಈ ಮಧ್ಯೆ ಹೊಸ ಪ್ರಪೋಸಲ್ ಪ್ರಕಾರ ಕೋಮುವಾರು ಹಾಸ್ಟಲುಗಳನ್ನು ಜನರಲ್ ಹಾಸ್ಟಲುಗಳಾಗಿ ಪರಿವರ್ತನೆ ಮಾಡುವುದಾದರೆ ನಾವು ಸಹಾಯಮಾಡುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಜನರಲ್ ಹಾಸ್ಟಲ್ ಆಗಿ ಪರಿವರ್ತನೆ ಮಾಡಿದರೆ ಅದರ ಮ್ಯಾನೇಜ್‌ಮೆಂಟ್ ಸರ್ಕಾರದವರ ಕೈಗೆ ಬರುತ್ತದೆ ಅಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ರೂಲ್ಸ್ ಇದ್ದಂತೆ ಆಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಹಾಸ್ಟಲಿನ ಅಧಿಕಾರ ಡೆಪ್ಯುಟಿ ಕಮಿಷನರು ಮತ್ತು ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಡೈರೆಕ್ಟರವರಿಗೆ ಹೋಗಿ ಕೋಮುವಾರು ಹಾಸ್ಟಲುಗಳು ಅಭಿವೃದ್ಧಿಗೆ ಬರಬೇಕಾಗಿದ್ದರೆ ತೊಂದರೆಯಾಗುವುದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೋಮುವಾರು ಹಾಸ್ಟಲುಗಳು ಉಳಿಯಬೇಕಾಗಿದ್ದರೆ ತೊಂದರೆಯಾಗಬಹುದು.

ಶ್ರೀ ಡಿ. ಆರ್. ಕರಿಗೌಡ.—ಈ ಹಾಸ್ಟಲುಗಳಿಗೆ ಇಂಡಿಯಾ ಸರ್ಕಾರದಿಂದ ಸಾಲ ಕೊಡುತ್ತಾರೆಯೇ, ಅಥವಾ ಮೈಸೂರು ಸರ್ಕಾರದಿಂದ ಕೊಡುತ್ತಾರೆಯೇ ಎಂಬುದನ್ನು ಹೇಳುವಿರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೈಸೂರು ಸರ್ಕಾರದಲ್ಲಿ ಈ ಸಾಲ ಕೊಡುವ ಪದ್ಧತಿ ಇಲ್ಲ. ಇಂಡಿಯಾ ಸರ್ಕಾರದವರು ಕೊಡುತ್ತೇವೆಂದು ಹೇಳಿರುತ್ತಾರೆ.

ಶ್ರೀ ಡಿ. ಆರ್. ಕರಿಗೌಡ.—ತಾವು ಬಿ.ಎಂ.ಎಸ್. ಕಾಲೇಜಿಗೆ ಸಾಲಕೊಟ್ಟಿದ್ದೀರಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು ಕಾಲೇಜಿಗೆ ಕೊಟ್ಟಿವ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಈ ಹಾಸ್ಟಲ್ಲಿಗೆ ಸಾಲ ಕೊಟ್ಟರೆ ಭದ್ರವಾದ ಅಸ್ತಿಯ ಆಧಾರ ಸಿಕ್ಕುತ್ತದೆ ಎನ್ನುವುದು ಗೊತ್ತಿದೆಯೇ?

Sri A. G. RAMACHANDRA RAO.—College is on a different footing from hostels, Sir.

Loan for Housing low income groups in Rural parts.

Q.—634. Sri. G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) the total allotment of the Government of India Loan to build houses in rural areas for low income groups for the year 1955-56 ;

(*b*) the manner of distribution of the above grants districtwar information to be furnished?

Sri A. G. RAMACHANDRA RAO (Minister for Law and Education).—

(*b*) Nil.

(*a*) Does not arise in view of reply to (*a*) above.

ಶ್ರೀ ಜಿ. ಪುಟ್ಟಸ್ವಾಮಿ.—ಗ್ರಾಮಾಂತರಗಳಲ್ಲಿ ವಾಸಮಾಡತಕ್ಕ ಕಡಿಮೆ ವರಮಾನವಿರತಕ್ಕ ಜನಗಳಿಗೆ ಇಂಡಿಯಾ ಸರ್ಕಾರದವರು ಸಾಲದ ಮೊಬಲಗನ್ನು ಕೊಟ್ಟಿದ್ದಾರೆನ್ನುವುದು ನಿಜವಲ್ಲವೆ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಾದರೆ ಎಷ್ಟು ಸಾಲ ಕೇಳಿದ್ದೀರಿ; ಅದರ ಯೋಜನೆ ಏನು ಎಂದು ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ Low Income Group Housing Scheme ಗ್ರಾಮಾಂತರ ಪ್ರದೇಶಗಳಿಗೆ ಅನ್ವಯಿಸುವುದಿಲ್ಲ. ಅದು ಜನಗಳ ಒತ್ತಡ ಹೆಚ್ಚಾಗಿರತಕ್ಕ ಪಟ್ಟಣಗಳಿಗೆ ಅನ್ವಯಿಸುತ್ತದೆ ಎಂದು ನನಗೆ ಗೊತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಗ್ರಾಮಾಂತರಗಳಲ್ಲಿ ವಾಸದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಕೊರತೆ ಇದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಅದಕ್ಕೇನಾದರೂ ಆಲೋಚನೆ ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್—ಮೈಸೂರು ಸರ್ಕಾರದವರು ಇದಕ್ಕಾಗಿ 2 ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ಗ್ರಾಂಟನ್ನು ಯಾವ ರೀತಿ ವಿನಿಯೋಗಿಸುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ವಿನಿಯೋಗಿಸಬೇಕೆಂದು ಮಾಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಂಚಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಹಂಚಿಲ್ಲ. ಈಗ ತಾನೇ ಅಪ್ಲಿಕೇಷನ್‌ಗಳನ್ನು ತರಿಸಿಕೊಂಡು ಮಾಡಬೇಕೆಂದು ಪ್ರಯತ್ನ ಮಾಡುತ್ತಿದೆ.

N. E. S. Blocks (Employments made).

Q.—29. Sri B. N. BORANNA GOWDA (Belur).—

Will the Government be pleased to state :—

(*a*) the number of appointments made in the N. E. S. Blocks in the